**ದಿನಾಂಕಃ 17-06-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

1. ನಾನು ಲಾರಿ ಹೊಂದಿದ್ದು, ಚಾಲಕನಾಗಿ ಕೆಲಸ ಮಾಡುತ್ತೇನೆ. ಫಜರುಲ್ಲಾನ ತಂದೆಯ ಹೆಸರು ಹಕೀಂಖಾನ್. ಸದರಿ ಫಜರುಲ್ಲಾ ಖಾನ್ ನನ್ನ ದೊಡ್ಡಪ್ಪನ ಮಗ . ಆತ ನನ್ನ ಸ್ವಂತ ಅಣ್ಣ ಅಲ್ಲ. ಆತ ರಿಟೇಲ್ ಬಟ್ಟೆಯ ವ್ಯಾಪಾರ ಮಾಡುತ್ತಾರೆ. ಎದುರುದಾರ ಮುನಿರ್ ಅಹ್ಮದ್ ಸಹ ಫಜರುಲ್ಲಾಖಾನ್ ನೊಂದಿಗೆ ಬಟ್ಟೆಯ ವ್ಯಾಪಾರ ಮಾಡುತ್ತಾನೆ. ಎದುರುದಾರ ಲೇತ್ ಮಶಿನ್ ಕೆಲಸ ಮಾಡುತ್ತಾನೆ ಎಂದು ಅರ್ಜಿದಾರಳು ಬರೆಯಿಸಿದ್ದಾಳೆ ಎಂದರೆ ಸಾಕ್ಷಿಯು ಆತ ಮೊದಲು ಬಟ್ಟೆ ವ್ಯಾಪಾರ ಮಾಡುತ್ತಿದ್ದ ಈಗ ಲೇತ್ ಮಶಿನ್ ನಡೆಸುತ್ತಾನೆ ಎಂದು ನುಡಿಯುತ್ತಾರೆ. ಮುನಿರಹ್ಮದ್ ನು ಫಜರುಲ್ಲಾಖಾನ್ ನೊಂದಿಗೆ ಬಟ್ಟೆ ವ್ಯಾಪಾರ ಮಾಡುತ್ತಿದ್ದ ಎನ್ನುವ ಕುರಿತು ನಾನು ಯಾವುದೇ ದಾಖಲೆಯನ್ನು ನೋಡಿಲ್ಲ. ಫಜರುಲ್ಲಾಖಾನ್ ಈಗ ರಾಣೇಬೆನ್ನೂರಿನಲ್ಲಿ ಇರುತ್ತಾನೆ ಎಂದರೆ ನಿಜ.

2. ಫಜರುಲ್ಲಾಖಾನ್ ಹಾಗೂ ಅರ್ಜಿದಾರಳ ಮಧ್ಯ ಜಗಳ ಆಗಿದ್ದರ ಕುರಿತು ಯಾವುದೇ ದೂರು ದಾಖಲಾಗಿಲ್ಲ. 2010 ರಲ್ಲಿ ನನ್ನ ಹಾಗೂ ಫಜರುಲ್ಲಾಖಾನ್ ವಿರುದ್ಧ ಒಂದು ದೂರು ದಾಖಲಾಗಿತ್ತು ಎಂದರೆ ನಿಜ. ಯಾವ ಆರೋಪದ ಮೇಲೆ ನಮ್ಮ ವಿರುದ್ಧ ದೂರನ್ನು ದಾಖಲಿಸಲಾಗಿತ್ತು ಎನ್ನುವುದು ನನಗೆ ನೆನಪಿಲ್ಲ. ಸದರಿ ಪ್ರಕರಣದಲ್ಲಿ ಏನಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಸಹ ಅರ್ಜಿದಾರ ನಜರುನ್ನೀಸಾ ಅವಳಿಗೆ ಸಂಬಂಧ ಪಟ್ಟದ್ದು ಎನ್ನುವುದು ನನಗೆ ಗೊತ್ತಿಲ್ಲ. ಅರ್ಜಿದಾರಳು ನಸರುಲ್ಲಾಖಾನ್ ನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾಳೆ ಎಂದು ಆರೋಪಿಸಿ ನಾವು ನಸರುಲ್ಲಾಖಾನ್ ನ್ನು ಹೊಡೆದಿದ್ದೆವು ಎಂದರೆ ಸರಿಯಲ್ಲ .

3.  ನಜರುನ್ನೀಸಾ ಹಾಗೂ ಫಜರುಲ್ಲಾಖಾನ್ ಇವರ ವಿವಾಹ ವಿಚ್ಛೇದನ ಆಗಿರುವ ಕುರಿತು ಜಮಾತ್ ನಲ್ಲಿ ಒಂದು ದಾಖಲೆ ಬರೆಯಲಾಗಿತ್ತು, ಸದರಿ ದಾಖಲೆಯನ್ನು ನಾವು ಅವರಿಗೆ ನೀಡಿದ್ದೇವೆ. ಸದರಿ ದಾಖಲೆಗೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ದಿಃ 05-10-2011 ರಂದು ಬರೆಯಲಾಗಿತ್ತು. ಫಜರುಲ್ಲಾಖಾನ್ ಹಾಗೂ ನಜರುನ್ನೀಸಾ ಅವರ ವಿವಾಹದ ವಿಚ್ಛೇದನ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4.  ಮುನಿರಹ್ಮದ್ ನು ನಜರುನ್ನೀಸಾ ಅವರೊಂದಿಗೆ ಮದುವೆಯಾಗಿರುವ ಕುರಿತು ಯಾವುದೇ ದಾಖಲೆಯನ್ನು ನಾನು ನೋಡಿಲ್ಲ ಆದರೆ ಅವರ ಮದುವೆಯಾಗಿದೆ ಎಂದು ಕೇಳಿ ಗೊತ್ತಿದೆ. ಅದರ ಕುರಿತು ಈ ಪ್ರಕರಣದ ಎದುರುದಾರನೇ ನನಗೆ ಹೇಳಿದ್ದ. ಆತನೊಂದಿಗೆ ಆತನ ಅಣ್ಣ ಅಸ್ಲಾಂಖಾನ್ ಸಹ ಬಂದಿದ್ದ. ಎದುರುದಾರನಿಗೆ ಯಾರೂ ಅಣ್ಣಂದಿರು ಇಲ್ಲ ಎಂದರೆ ಸಾಕ್ಷಿಯು ಚಿಕ್ಕಪ್ಪನ ಮಗ ಬಂದಿದ್ದ ಎಂದು ನುಡಿಯುತ್ತಾರೆ. ಅದನ್ನು ಹೊರತು ಪಡಿಸಿ ನನಗೆ ಬೇರೆ ಏನೂ ಗೊತ್ತಿಲ್ಲ ಎಂದರೆ ನಿಜ.

5.  ಈ ಪ್ರಕರಣವನ್ನು ಯಾರು, ಯಾರ ವಿರುದ್ಧ ಮತ್ತು ಯಾವುದಕ್ಕಾಗಿ ದಾಖಲಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಈ ಪ್ರಕರಣದ ಕುರಿತು ನನಗೆ ಮಾಹಿತಿ ಇರದಿದ್ದರೂ ಸಹ ಮುನಿರಹ್ಮದ್ ನು ನಜರುನ್ನೀಸಾಳ ತಲೆ ಕೆಡಸಿ ಮದುವೆ ಮಾಡಿಕೊಂಡಿದ್ದಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.